1. ತಿಂಗಳಲ್ಲಿ 22 ದಿನ ಕರ್ತವ್ಯ ನಿರ್ವಹಿಸಿದಲ್ಲಿ ಮಾಸಿಕ ರೂ.500/– ಹಾಜರಾತಿ ಪ್ರೋತ್ಸಾಹದನವಾಗಿ ನೀಡಲಾಗುತ್ತಿದೆ.
2. ಬೆಂಗಳೂರು ಹಾಗೂ ಮಂಗಳೂರು ಕೇಂದ್ರ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತರಬೇತಿ ನೌಕರರಿಗೆ ಮಾಸಿಕ ರೂ.500/– ಪರಿಶ್ರಮ ಭತ್ಯೆಯನ್ನು ನೀಡಲಾಗುತ್ತಿದೆ.
3. ಚಾಲಕ ಕಂ ನಿರ್ವಾಹಕ ಹುದ್ದೆಯ ಅಭ್ಯರ್ಥಿಗಳು ಎರಡೂ ಹುದ್ದೆಗಳಲ್ಲಿ ಒಟ್ಟಿಗೆ ಕರ್ತವ್ಯ ನಿರ್ವಹಿಸಿದಲ್ಲಿ ಒಂದು ಕರ್ತವ್ಯಕ್ಕೆ ರೂ.75/– ಪ್ರೋತ್ಸಾಹ ದನವನ್ನು ನೀಡಲಾಗುತ್ತಿದೆ.
4. ಕರ್ತವ್ಯ ನಿರ್ವಹಿಸಿ ಸಂದಾಯವಾದ ಒಟ್ಟು ಸಾರಿಗೆ ಆದಾಯದ ಶೇಕಡ 2 ರ ಮೊತ್ತವನ್ನು ಪ್ರೋತ್ಸಾಹ ದನವಾಗಿ ನೀಡಲಾಗುತ್ತಿದೆ.
5. ಸಮವಸ್ತ್ರ/ರೈನ್‌ಕೋಟ್/ಜರ್ಸಿ ವಿತರಿಸಲಾಗುತ್ತಿದ್ದು ಜೊತೆಗೆ ಹೊಲಿಗೆ ಖರ್ಚು ಹಾಗೂ ವಾಷಿಂಗ್ ಭತ್ಯೆಯನ್ನು ನೀಡಲಾಗುತ್ತಿದೆ.

ಈ ತರಭೇತಿ ಭತ್ಯೆಯನ್ನು ಮಂಡಳಿ ಅನುಮೋದನೆಯಂತೆ ನಿಗದಿ ಪಡಿಸಲಾಗಿದೆ.

ಆ) ಖಾಸಗಿ ಸಂಸ್ಥೆಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಹೆಚ್ಚು ಸೌಲಭ್ಯಗಳನ್ನು ನೀಡಲಾಗುತ್ತಿರುತ್ತದೆ. ಇದರಿಂದ ತರಬೇತಿ ನೌಕರರಿಗೆ ಜೀವನವನ್ನು ನಡೆಸಲು ಯಾವುದೇ ರೀತಿಯ ಹೊರೆಯಾಗುವುದಿಲ್ಲ.

ಇ) ಖಾಸಗಿ ಸಂಸ್ಥೆಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಹೆಚ್ಚು ಸೌಲಭ್ಯಗಳನ್ನು ನೀಡಲಾಗುತ್ತಿದೆ. ಇದರಿಂದ ತರಬೇತಿ ನೌಕರರಿಗೆ ಜೀವನವನ್ನು ನಡೆಸಲು ಯಾವುದೇ ರೀತಿಯ ಹೊರೆಯಾಗುವುದಿಲ್ಲ.

ಅಂಗನವಾಡಿ ಹಾಗೂ ಉಪ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವುದು

376 (380) ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಮತ್ತು ಉಪ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳೇನು?

ಆ) ಬಿಜಾಪುರ ನಗರದಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಂಗನವಾಡಿ ಕೇಂದ್ರಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಿಜಾಪುರ ನಗರದಲ್ಲಿರುವ ಅಂಗನವಾಡಿ ಹಾಗೂ ಉಪ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು? ಅವು ಯಾವುವು? ವಿವರ ನೀಡುವುದು;

ಈ) ಬಿಜಾಪುರ ನಗರಕ್ಕೆ ಕಳೆದ ಮೂರು ವರ್ಷಗಳಿಂದ ಮಂಜೂರಾದ ಅಂಗನವಾಡಿ ಹಾಗೂ ಉಪ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು? ಅವು ಯಾವುವು?

ಉ) ಬಿಜಾಪುರ ನಗರದಲ್ಲಿ ಹೊಸದಾಗಿ ಅಂಗನವಾಡಿ ಹಾಗೂ ಉಪ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಊ) ಇದ್ದಲ್ಲಿ ಎಷ್ಟು ಅಂಗನವಾಡಿ ಹಾಗೂ ಉಪ ಅಂಗನವಾಡಿ ಕೇಂದ್ರಗಳನ್ನು ಹೊಸದಾಗಿ ಮಂಜೂರು ಮಾಡಲಾಗಿದೆ? ಅದಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಅಂಗನವಾಡಿ ಹಾಗು ಮಿನಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಜನಸಂಖ್ಯೆ ಮಾನದಂಡಗಳು ಈ ಕೆಳಕಂಡಂತಿರುತ್ತವೆ.

ಜನಸಂಖ್ಯೆ ಮಾನದಂಡಗಳು :–

1. ನಗರ/ಗ್ರಾಮಾಂತರ ಯೋಜನೆಗಳಲ್ಲಿ

400 ರಿಂದ 800 ಜನಸಂಖ್ಯೆಗೆ 1 ಅಂಗನವಾಡಿ ಕೇಂದ್ರ,
800 ರಿಂದ 1600 ಜನಸಂಖ್ಯೆಗೆ 2 ಅಂಗನವಾಡಿ ಕೇಂದ್ರ,
1600 ರಿಂದ 2400 ಜನಸಂಖ್ಯೆಗೆ 3 ಅಂಗನವಾಡಿ ಕೇಂದ್ರ,

2400 ಕ್ಕಿಂತ ಜನಸಂಖ್ಯೆ ಮೀರಿದಲ್ಲಿ ಪ್ರತಿ 800 ಕ್ಕೆ 1 ಅಂಗನವಾಡಿ ಕೇಂದ್ರ.

2. ಮಿನಿ ಅಂಗನವಾಡಿ ಕೇಂದ್ರಗಳಿಗೆ:

150 ರಿಂದ 400 ಜನಸಂಖ್ಯೆಗೆ 1 ಮಿನಿ ಅಂಗನವಾಡಿ ಕೇಂದ್ರ.

3. ಗಿರಿಜನ ಯೋಜನೆಗಳಲ್ಲಿ 300 ರಿಂದ 800 ಜನಸಂಖ್ಯೆಗೆ 1 ಅಂಗನವಾಡಿ ಕೇಂದ್ರ.

ಮಿನಿ ಅಂಗನವಾಡಿ ಕೇಂದ್ರಗಳಿಗೆ :

150 ರಿಂದ 300 ಜನಸಂಖ್ಯೆಗೆ 1 ಮಿನಿ ಅಂಗನವಾಡಿ ಕೇಂದ್ರ.

ಆ) ಬಂದಿದೆ.

ಇ) ಬಿಜಾಪುರ ನಗರದಲ್ಲಿ 2009–10 ರ ಮೊದಲು ಯಾವುದೇ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿರುವುದಿಲ್ಲ.

2009–10 ನೇ ಸಾಲಿನಲ್ಲಿ 51 ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ. ಪ್ರತಿ ಅನುಬಂಧದಲ್ಲಿ ಒದಗಿಸಿದೆ.

ಈ) ಕಳೆದ ಮೂರು ವರ್ಷಗಳಿಂದ ಬಿಜಾಪುರ ನಗರಕ್ಕೆ ಅಂಗನವಾಡಿ ಕೇಂದ್ರ ಹಾಗೂ ಉಪ ಅಂಗನವಾಡಿ ಕೇಂದ್ರ ಹಾಗೂ ಉಪ ಅಂಗನವಾಡಿ ಕೇಂದ್ರಗಳು ಮಂಜೂರಾಗಿರುವುದಿಲ್ಲ. ಬಿಜಾಪುರ ನಗರಕ್ಕೆ 2009–10 ನೇ ಸಾಲಿನಲ್ಲಿ 51 ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

ಉ) ಹೌದು.

ಊ) ಬಿಜಾಪುರ ನಗರಕ್ಕೆ 51 ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. 193 ಅಂಗನವಾಡಿ ಕೇಂದ್ರಗಳ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಬಿಜಾಪುರ ನಗರಕ್ಕೆ ಮಂಜೂರು ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಅನುಬಂಧ – 1

51 ಅಂಗನವಾಡಿ ಕೇಂದ್ರಗಳ ಮಾಹಿತಿ			
ಕ್ರ.ಸಂ.	ಚುನಾವಣೆ ಪ್ರಕಾರ ವಾರ್ಡ ನಂ.	ಪ್ರದೇಶದ ಹೆಸರು	ಮೀಸಲಾತಿ
1	5	ಮಲ್ಲಿಕಾರ್ಜುನ ನಗರ	ಇತರೆ
2	3	ಕುಂಬಾರ ಗಲ್ಲಿ	ಇತರೆ
3	7	ಡೋಬಳೆ ಗಲ್ಲಿ	ಇತರೆ
4	9	ವೆಂಕಟರಮಣ ಗಲ್ಲಿ	ಇತರೆ
5	8	ಅಳವಿ ಮಸೀದಿ	ಅ.ಸಂ
6	10	ಮೈಬೂಬ ನಗರ S.S.ಹೈಸ್ಕೂಲ್ ಹಿಂದುಗಡೆ	ಅ.ಸಂ
7	11	ರಜಪೂತಗಲ್ಲಿ	ಇತರೆ
8	13	ಗೊಲ್ಲರ ಓಣಿ, ಇಂಡಿ ರೋಡ	ಪ.ಜಾ
9	10	ಮಿನಿ ಮಾದರ ಓಣಿ (ವಡ್ಡರ ಗಲ್ಲಿ)	ಪ.ಜಾ
10	11	ಗಿಸಾಡಿ ಕಾಲನಿ ಇಂಡಿ ರೋಡ ಹತ್ತಿರ	ಪ.ಜಾ
11	11	ಜಾತಗಾರ ಗಲ್ಲಿ	ಅ.ಸಂ
12	14	ರಂಗಿ ಮಸೀದಿ	ಅ.ಸಂ
13	15	ದಶದ ದವಾಖಾನ ಹತ್ತಿರ	ಪ.ಜಾ
14	14	ಸುಣಗಾರ ಗಲ್ಲಿ	ಇತರೆ
15	14	ಮಾಂಗ ಗಾರುಡಿ (ರಾಣಿ ಬಗೀಚ) ಓಣಿ	ಪ.ಜಾ
16	15	ಶಿಕಾರಖಾನಾ ಓಣಿ	ಇತರೆ
17	33	ಅಗಸರ ಗಲ್ಲಿ, ಗವಾರ ಗಲ್ಲಿ, ಬಣಗಾರ ಗಲ್ಲಿ	ಇತರೆ
18	20	ಪೇಟೆ ಟಾವಡಿ	ಅ.ಸಂ
19	20	ಗಚ್ಚನಮಹರ	ಅ.ಸಂ

20	19	ಪೈಲ್ವಾನ ಗಲ್ಲಿ I&II	ಅ.ಸಂ
21	18	ಪಾಶ್ವಾಪೂರ ರೋಡ	ಇತರೆ
22	18	ಜಾಡರಗಲ್ಲಿ	ಪ.ಜಾ
23	18	ಕುಂಚಿಕೊರವರ ಓಣಿ	ಪ.ಜಾ
24	18	ಹರನ ಶಿಕಾರಿ ಕೊಳಚೆ ಪ್ರದೇಶ	ಪ.ಜಾ
25	17	ಅಲ್ಲಾಪೂರ ತಾಂಡಾ	ಪ.ಜಾ
26	26	ಬಡೀ ಕಮಾನ ಹತ್ತಿರ	ಪ.ಜಾ
27	23	ಮರಾಠಿ ವಿದ್ಯಾಲಯ ಹತ್ತಿರ I&II	ಪ.ಜಾ
28	30	ಟಿಪ್ಪು ಸುಲ್ತಾನ ನಗರ	ಅ.ಸಂ
29	30	ಮಹಮ್ಮದ ನಗರ/ನಿಸಾರ ಮಡ್ಡಿ	ಅ.ಸಂ
30	28	ಲಂಗರ ಬಜಾರ	ಅ.ಸಂ
31	27	ಜೋಡ ಗುಮ್ಮಟ ಪಶ್ಚಿಮ ಭಾಗ	ಅ.ಸಂ
32	31	ತಾಜಬಾವಡಿ ಪಶ್ಚಿಮ ಭಾಗ	ಅ.ಸಂ
33	5	ಖಿದಾನಪೂರ ಗಲ್ಲಿ	ಅ.ಸಂ
35	33	ಗದ್ದಲ ತಿಪ್ಪಿ	ಇತರೆ
36	34	ಶಾಸ್ತ್ರಿ ನಗರ (ಜೋಪಡ ಪಟ್ಟಿ ಏರಿಯಾ)	ಅ.ಸಂ
37	14	ಕಂಜರ ಭಾಟ	ಪ.ಜಾ
38	1	ಗ್ಯಾಂಗ ಬಾವಡಿ	ಇತರೆ
39	2	ಅಫಜಲಪುರ ಟಕ್ಕೆ	ಅ.ಸಂ
40	6	ಶಹಾಪೂರ ಅಗಸಿ	ಇತರೆ
41	12	ಲಕ್ಷ್ಮೀ ನಗರ	ಇತರೆ
42	21	ಇಬ್ರಾಹಿಂಪೂರ SC ಕಾಲೋನಿ	ಪ.ಜಾ
44	25	ಆಸಾರ ಗಲ್ಲಿ	ಪ.ಜಾ

45	35	ಟ್ರೇಜರಿ ಕಾಲನಿ (ನಂದಿ ನಗರ)	ಇತರೆ
46	16	ಗಾಂಧಿನಗರ	ಇತರೆ
47	30	ಅಲ್ಲಿಕಾ ರೋಜಾ	ಅ.ಸಂ
48	4	ವಾಲಿಕಾರ ವಸ್ತಿ (ಬೂಥನಾಳ)	ಇತರೆ
49	22	ಜಲನಗರ (EWS ಕ್ವಾಟರ್ಸ್)	ಇತರೆ
50	29	ಬಸವನಗರ	ಇತರೆ
51	32	ಗೊಂಧಳೆಗಲ್ಲಿ	ಇತರೆ

ಮಾಗಡಿ ಕ್ಷೇತ್ರದ ಸಾರ್ವಜನಿಕ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು

377 (610) ಶ್ರೀ ಬಾಲಕೃಷ್ಣ. ಹೆಚ್.ಸಿ (ಮಾಗಡಿ) : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಮಾಗಡಿ ಹಾಗೂ ಬಿಡದಿ ಸಾರ್ವಜನಿಕ ಆಸ್ಪತ್ರೆಗಳನ್ನು ಎಷ್ಟು ಹಾಸಿಗೆಗಳಿಂದ ಎಷ್ಟು ಹಾಸಿಗೆಗೆ ಮೇಲ್ದರ್ಜೆಗೇರಿಸಲಾಗಿದೆ;

ಆ) ಈ ಆಸ್ಪತ್ರೆಗಳನ್ನು ಯಾವ ದಿನಾಂಕದಿಂದ ಮೇಲ್ದರ್ಜೆಗೇರಿಸ ಲಾಗಿದೆ; ಇದರ ಸ್ವರೂಪವೇನು;

ಇ) ಈ ಮೇಲ್ದರ್ಜೆಗನುಗುಣವಾಗಿ ಸುಸಜ್ಜಿತ ಕಟ್ಟಡದ ವ್ಯವಸ್ಥೆಗೆ ತೆಗೆದುಕೊಂಡಿರುವ ಕ್ರಮಗಳೇನು; ಈಗ ಯಾವ ಹಂತದಲ್ಲಿದೆ ಎಂಬುದರ ಸಂಪೂರ್ಣ (ವಿವರ ನೀಡುವುದು);

ಈ) ಈ ಆಸ್ಪತ್ರೆಗಳಿಗೆ ಮಂಜೂರಾತಿಯಾಗಿರುವ ವೈದ್ಯಕೀಯ ಹಾಗೂ ವೈದ್ಯಕೀಯೇತರ ಸಿಬ್ಬಂದಿ ಹಾಗೂ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಕೀಯ ಹಾಗೂ ವೈದ್ಯಕೀಯೇತರ ಸಿಬ್ಬಂದಿಯ ಸಂಪೂರ್ಣ (ವಿವರ ನೀಡುವುದು);

ಉ) ಖಾಲಿಯಿರುವ ವೈದ್ಯಕೀಯ ಹಾಗೂ ವೈದ್ಯಕಿಯೇತರ ಸಿಬ್ಬಂದಿಯನ್ನು ತಕ್ಷಣವೇ ಭರ್ತಿ ಮಾಡಲಾಗುತ್ತದೆ ಎಂದು ತಿಳಿಸಿದ್ದರೂ ಸಹ ಇನ್ನೂ ಭರ್ತಿ ಮಾಡದೆ ಇರಲು ಕಾರಣಗಳೇನು?